# ಚಿಕ್ಕ ವಯಸ್ಸಿಗೇ ದೊಡ್ಡ ಅನುಭವ

ನಾಯಕ ಹಾಗೇ ನಿಂತಿದ್ದರೆ, ಪಕ್ಕದ ಕುರ್ಚಿ ಮೇಲೆ ಈ ಕುಳ್ಳಗಿನ ಹುಡುಗಿಯನ್ನು ನಿಲ್ಲಿಸಿ ಫೋಟೊ ತೆಗೆಯುತ್ತಾ ಕೆಲವರು ಮಾತಿನ ಮೂಲಕ ಕಾಲೆಳೆದರು. ಮುದ್ದಾದ ಗುಂಡುಮುಖದ ಆ ಹುಡುಗಿ ನಕ್ಕಳು. ಅವಳ ಗಲ್ಲದ ಮೇಲಿನ್ನೂ ಮುಗ್ಧತೆಯ ಪಸೆ. ಫೋಟೊ ತೆಗೆಸಿಕೊಂಡ ಕೆಲವು ದಿನಗಳ ನಂತರ ಮತ್ತೊಂದು ಸುದ್ದಿಗೋಷ್ಠಿ. ಆಗ ಹುಡುಗಿ ಕುರ್ಚಿ ಮೇಲೆ ನಿಲ್ಲಬೇಕಾಗಲಿಲ್ಲ. ಪಕ್ಕದಲ್ಲಿದ್ದ ನಾಯಕ ಕೂಡ ಕುಳ್ಳಗೇ ಇದ್ದರು. ಚೆಲುವಿನ ಚಿತ್ತಾರ ಬಿಡಿಸಿದ ನಿರ್ದೇಶಕ ಕೂಡ ಒಂದು ಗೆಲುವಿನ ನಿರೀಕ್ಷೆಯಲ್ಲಿದ್ದರು.

ನಾಯಕಿಯಾಗಿ ಗೆದ್ದ ಅವರಿಗೆ ಮುಂದೆ ಹಲವು ಬಬ್ಲಿ ಪಾತ್ರಗಳು ಒಲಿದುಬಂದವು. ಅದಕ್ಕೆ ಮೊದಲು ಬಾಲನಟಿಯಾಗಿಯೂ ಕೆಲವು ಸಿನಿಮಾಗಳಲ್ಲಿ ಅವರು ಕಾಣಿಸಿಕೊಂಡಿದ್ದು ಎಷ್ಟೋ ಜನರಿಗೆ ನೆನಪಿರಲಿಕ್ಕಿಲ್ಲ. ಕಾಲೇಜು ಮೆಟ್ಟಿಲು ಇಳಿಯುವ ಮೊದಲೇ ನಾಯಕಿಯಾದಾಗ ಬೆಂಗಳೂರಿನ ಶೇಷಾದ್ರಿಪುರದ ಗಲ್ಲಿಗಳಲ್ಲಿ ಸಂಚಲನ. ಮುಗ್ಧತೆ ಇನ್ನೂ ಮಾಯವಾಗಿರಲಿಲ್ಲವಾದದ್ದರಿಂದ ಜನಪ್ರಿಯತೆ ನಿಭಾಯಿಸುವುದು ತಮಾಷೆಯಾಗಿರಲಿಲ್ಲ. ಅದೊಮ್ಮೆ ನಿರ್ದೇಶಕರು ಮುಗ್ಧ ಹುಡುಗಿಯನ್ನು ಬುಟ್ಟಿಗೆ ಹಾಕಿಕೊಂಡಿದ್ದಾರೆ ಎಂಬ ವದಂತಿ ಹಬ್ಬಿತು. ಅದರಿಂದ ವಿಚಲಿತರಾದ ನಾಯಕಿ ಸಿನಿಮಾ ಸಹವಾಸವೇ ಸಾಕು ಎಂಬ ತೀರ್ಮಾನಕ್ಕೆ ಬಂದುಬಿಟ್ಟರು.

ನಾಯಕಿಯ ಅಣ್ಣನೂ ಸಿನಿಮಾ ಮೋಹಿ. ತಾನೇ ಒಮ್ಮೆ ನಿರ್ದೇಶಕನ ಟೋಪಿ ತೊಟ್ಟಾಗ, ಮನೆಯವರೆಲ್ಲಾ ಬೆಂಬಲಕ್ಕೆ ನಿಂತರು. ಪ್ರೀತಿಯ ಮನೋಸೂಕ್ಷ್ಮಗಳನ್ನು ಕಟ್ಟಿಕೊಡುವ ಸಂಗೀತಾತ್ಮಕ ಸಿನಿಮಾ ಅದಾಗಿದ್ದರೂ ದಯನೀಯವಾಗಿ ಸೋತಿತು. ಸೋಲೇ ಗೆಲುವಿಗೆ ಸೋಪಾನ ಎಂದು ಭಾವಿಸುವ ಈ ನಟಿ ಕಹಿಗಳನ್ನು ಮರೆತರು. ಬಂದ ಒಳ್ಳೆಯ ಅವಕಾಶಗಳನ್ನು ಬಿಟ್ಟುಕೊಡಲಿಲ್ಲ. ಶ್ರಾವಣಿಯಾದದ್ದೇ ಅವರ ವೃತ್ತಿಬದುಕಿನಲ್ಲಿ ಶ್ರಾವಣ. ಯಶ ಪಡೆದ ನಾಯಕ ಜೊತೆಯಾಗುವ ಅವಕಾಶ ಸಿಕ್ಕಮೇಲಂತೂ ಮಾರುಕಟ್ಟೆ ಕುದುರಿದ್ದೇ ಕುದುರಿದ್ದು. ಮುಗ್ಧ ಮುಖವೇ ಈಗಲೂ ಬಂಡವಾಳ. ಕಂಠದಲ್ಲಿ ಕೂಡ ಮಗುವಿನ ಆರ್ದ್ರತೆ ಇರುವುದು ವರದಾನ. 'ಕಣ್ಣಿಗೆ ಕಾಣುವಷ್ಟು ಮುಗ್ಧೆ ನಾನಲ್ಲ. ವೃತ್ತಿಯ ವಿಷಯಕ್ಕೆ ಬಂದರೆ ಯಾವ ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಿದೆ. ಪಾತ್ರಗಳ ಆಯ್ಕೆ ಹೇಗೆ ಮಾಡಿಕೊಳ್ಳಬೇಕು ಎಂದು ಹಂತ ಹಂತವಾಗಿ ಕಲಿತಿದ್ದೇನೆ' ಎನ್ನುವ ನಾಯಕಿ, ಕಳೆದ ಕೆಲವು ಋತುಗಳಿಂದ ಮತ್ತೆ ಹಿಟ್‌ಗಾಗಿ ಹಪಹಸಪಿಸುವಂತಾಗಿದೆ. 'ಮದುವೆಯ ಮಮತೆಯ ಕರೆಯೋಲೆ'ಗೆ ಪ್ರೇಕ್ಷಕರು ಓಗೊಡಲಿಲ್ಲ. 'ಕೃಷ್ಣ–ರುಕ್ಕು' ಲಕ್ಕು ಸರಿ ಇರಲಿಲ್ಲ. ಆದರೂ ಇನ್ನೆರಡು ಸಿನಿಮಾಗಳನ್ನು ಕೈಲಿಟ್ಟುಕೊಂಡಿರುವ ನಾಯಕಿಗೆ ಇನ್ನೂ ವಯಸ್ಸು ಇಪ್ಪತ್ತೆರಡು. ಎಂಟನೇ ವಯಸ್ಸಿಗೆ ಬಾಲನಟಿಯಾಗಿದ್ದ ಅವರು ಇಷ್ಟು ಬೇಗ ಇಂಥ ಜೀವನಾನುಭವ ಪಡೆಯುವುದು ತಮಾಷೆಯಲ್ಲ.

**• ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68